


ಕಪ್, ಏಷ್ಯನ್ ಬೀಚ್ ಗೇಮ್ಸ್, ಇಂಡೋರ್ ಗೇಮ್ಸ್, ಸೌತ್ ಏಷ್ಯನ್ ಗೇಮ್ಸ್, ದುಬೈ ಕಬಡ್ಡಿ ಮಾಸ್ಟರ್ಸ್ – ಹೀಗೆ ಪ್ರತಿಯೊಂದರಲ್ಲಿಯೂ ಚಿನ್ನದ ಹೊಳಪು ಮೂಡಿಸಿದೆ. ಅಂತರರಾಷ್ಟ್ರೀಯ ಮಟ್ಟದಲ್ಲಿ ಯಾವುದೇ ಕಬಡ್ಡಿ ಟೂರ್ನಿ ನಡೆದರೂ ಭಾರತವೇ ಚಿನ್ನದ ಪದಕ ಗೆಲ್ಲುವುದು ನಿಶ್ಚಿತ ಎನ್ನುವ ಚರ್ಚೆ ಸಾಮಾನ್ಯ. ಹಳ್ಳಿಮಟ್ಟದಿಂದ ಜಗತ್ತು ತಲುಪಿದ ಈ ಕ್ರೀಡೆಯಲ್ಲಿ ಭಾರತಕ್ಕೆ ಸರಿಸಾಟಿಯಾಗುವವರು ಯಾರೂ ಇಲ್ಲವೆನ್ನುವ ಒಕ್ಕೊರಲ ಅಭಿಪ್ರಾಯವೂ ಇತ್ತು.

ಆದರೆ, ‘ಪ್ರೊ. ಕಬಡ್ಡಿ’ಯಲ್ಲಿ ಆಡಿದ ವಿದೇಶಿ ಆಟಗಾರರು ಜಗತ್ತಿಗೆ ಕಬಡ್ಡಿ ಪಾಠ ಮಾಡಿದ ದೇಶಕ್ಕೇ ತಿರುಗೇಟು ನೀಡುವ ಹಂತಕ್ಕೆ ಅಭಿವೃದ್ಧಿ ಕಂಡಿದ್ದಾರೆ. 2018ರ ಜಕಾರ್ತದಲ್ಲಿ ನಡೆದ ‘ಏಷ್ಯನ್ ಗೇಮ್ಸ್’ ಇದಕ್ಕೊಂದು ಉದಾಹರಣೆ. ಈ ಕ್ರೀಡಾಕೂಟ 1990ರಲ್ಲಿ ಬೀಜಿಂಗ್‌ನಲ್ಲಿ ಆರಂಭವಾದ ವರ್ಷದಿಂದ ಹಿಡಿದು ಹಿಂದಿನ ಟೂರ್ನಿಗೂ ಮೊದಲು ಭಾರತವೇ ಸತತ ಏಳು ಸಲ ಚಿನ್ನದ ಪದಕಗಳನ್ನು ಗೆದ್ದುಕೊಂಡಿದೆ. ಈ ಅವಧಿಯಲ್ಲಿ ಎರಡು ಹಾಗೂ ನಾಲ್ಕನೇ ಸ್ಥಾನಗಳನ್ನು ಗಳಿಸುತ್ತಿದ್ದ ಇರಾನ್ ಹಿಂದಿನ ಟೂರ್ನಿಯಲ್ಲಿ ಭಾರತದ ಚಿನ್ನದ ಹೊಳಪಿಗೆ ಪೆಟ್ಟು ನೀಡಿ ಚಾಂಪಿಯನ್ ಪಟ್ಟ ತನ್ನದಾಗಿಸಿಕೊಂಡಿತ್ತು. ಆ ವರ್ಷ ದಕ್ಷಿಣ ಕೊರಿಯಾ ರನ್ನರ್ಸ್ ಅಪ್ ಆಗಿ ಪಾಕಿಸ್ತಾನ ಮೂರನೇ ಸ್ಥಾನ ಪಡೆದುಕೊಂಡಿತು. ಸತತ ಸಪ್ತ ಚಿನ್ನಗಳ ಒಡೆಯ ಭಾರತಕ್ಕೆ ಸಿಕ್ಕಿದ್ದು ನಾಲ್ಕನೇ ಸ್ಥಾನ!

ಜಾಗತಿಕ ಮಟ್ಟದಲ್ಲಿ ಚಿನ್ನದ ಪದಕಗಳ ಬೇಟೆಯಲ್ಲಿ ಕನಿಷ್ಠ ಪೈಪೋಟಿಯೂ ಇಲ್ಲದೇ ಒಂಟಿಸಲಗದಂತೆ ಸಾಗಿದ್ದ ಭಾರತ ಕಬಡ್ಡಿ ತಂಡಕ್ಕೆ 2018ರಲ್ಲಿ ಬಿದ್ದ ಮೊದಲ ಸೋಲಿನ ಪೆಟ್ಟಿನ ಬಗ್ಗೆ ಅನೇಕ ಮಾಜಿ ಆಟಗಾರರು ಧ್ವನಿ ಎತ್ತಿದ್ದರು. ಭವಿಷ್ಯದಲ್ಲಿ ಭಾರತದ ಕಬಡ್ಡಿ ಪಟ್ಟು ಸಡಿಲಿಕೆಯಾಗುವ ಸೂಚನೆಯೇ ಇದು? ಎನ್ನುವ ಅನುಮಾನ ವ್ಯಕ್ತಪಡಿಸಿದ್ದರು. ಇತ್ತೀಚೆಗಿನ ವರ್ಷಗಳಲ್ಲಿ ಭಾರತಕ್ಕೆ ಪ್ರಬಲ ಪೈಪೋಟಿ ಒಡ್ಡುತ್ತಿರುವ ಇರಾನ್ ಏಷ್ಯನ್ ಚಾಂಪಿಯನ್‌ಷಿಪ್‌ನಲ್ಲಿ ಮೂರು ಸಲ ಮೂರನೇ ಸ್ಥಾನ ಗಳಿಸಿದೆ. ‘ಏಷ್ಯನ್ ಗೇಮ್ಸ್‌ನ ಸ್ಟ್ಯಾಂಡರ್ಡ್ ಸ್ಟೈಲ್’ ಟೂರ್ನಿಯಲ್ಲಿ ಇರಾನ್ ಒಂದು ಸಲ ಚಿನ್ನ ಮತ್ತು ಎರಡು ಬಾರಿ ಬೆಳ್ಳಿ ಪದಕಗಳನ್ನು ಜಯಿಸಿದೆ. ಭಾರತದಲ್ಲಿ ನಡೆದ ಮೂರೂ ವಿಶ್ವಕಪ್‌ಗಳಲ್ಲಿ ರನ್ನರ್ಸ್ ಅಪ್ ಸ್ಥಾನ ಪಡೆದಿದೆ. ಏಷ್ಯನ್ ಬೀಚ್ ಗೇಮ್ಸ್‌ನಲ್ಲಿ ಮೂರು ಸಲ ಚಿನ್ನ ಗೆದ್ದು ಭಾರತಕ್ಕೆ ಪ್ರಬಲ ಎದುರಾಳಿ ಎನಿಸಿದೆ.

ವಿಶ್ವಮಟ್ಟದ ಕಬಡ್ಡಿ ರ‍್ಯಾಂಕಿಂಗ್‌ನಲ್ಲಿ ಭಾರತ ಅಗ್ರಸ್ಥಾನದಲ್ಲಿದ್ದರೆ, ನಂತರದ ಸ್ಥಾನವನ್ನು ಇರಾನ್ ಹೊಂದಿದೆ. ಪಾಕಿಸ್ತಾನ, ದಕ್ಷಿಣ ಕೊರಿಯಾ, ಬಾಂಗ್ಲಾದೇಶ ಮತ್ತು ಶ್ರೀಲಂಕಾ ರಾಷ್ಟ್ರಗಳ ತಂಡಗಳು ನಂತರದ ಸ್ಥಾನಗಳಲ್ಲಿವೆ. ಹೀಗಾಗಿ ಇರಾನ್ ಏಷ್ಯನ್ ಚಾಂಪಿಯನ್‌ಷಿಪ್‌ನಲ್ಲಿಯೂ ಭಾರತಕ್ಕೆ ಕಠಿಣ ಸವಾಲು ಒಡ್ಡಬಲ್ಲದು.

‘ಪ್ರೊ. ಕಬಡ್ಡಿ’ ಲೀಗ್‌ನ ಅನುಭವಿ ರೈಡರ್ ನವೀನ ಕುಮಾರ್ ಮತ್ತು ಪವನ್ ಶೆರಾವತ್ ತಂಡವನ್ನು ಮುನ್ನಡೆಸಲಿದ್ದಾರೆ. ಕಳೆದ ವರ್ಷದ ಅಕ್ಟೋಬರ್‌ನಲ್ಲಿ ಗಾಯಗೊಂಡು ತಂಡದಿಂದ ಹೊರಗುಳಿದಿದ್ದ ಪವನ್ ಶೆರಾವತ್ ರಾಷ್ಟ್ರೀಯ ತಂಡಕ್ಕೆ ಮರಳಿದ್ದಾರೆ. ಅಸ್ಲಾಮ್ ಇನಾಮದಾರ್, ಮೋಹಿತ್ ಗೊಯತ್, ‘ಡು ಆರ್ ಡೈ ರೈಡ್‌ನ’ ಪರಿಣತ ಸಚಿನ್, ರಕ್ಷಣಾ ವಿಭಾಗದಲ್ಲಿ ಸುನಿಲ್ ಕುಮಾರ್, ನಿತೀಶ್ ಕುಮಾರ್, ಯುವ ಹಾಗೂ ಅನುಭವಿಗಳ ಮಿಶ್ರಣವಾದ ನವೀನ್ ಕುಮಾರ್, ಪರ್ವೇಶ್ ಬೈಸ್ವಾಲ್, ನಿತಿನ್ ರಾವಲ್, ಸುರ್ಜಿತ್ ಸಿಂಗ್ ವಿಶಾಲ್ ಭಾರದ್ವಾಜ್ ತಂಡದ ಬಲ ಹೆಚ್ಚಿಸುವರು. ಉತ್ತರ ಪ್ರದೇಶದ ಮುಜಾಫರ್ ನಗರದ ಬಸೆರಾ ಗ್ರಾಮದ 22 ವರ್ಷದ ಅರ್ಜುನ್ ದೇಸ್ವಾಲ್ ಮೊದಲ ಬಾರಿಗೆ ರಾಷ್ಟ್ರೀಯ ತಂಡದಲ್ಲಿ ಸ್ಥಾನ ಪಡೆದಿದ್ದಾರೆ. ‘ಪ್ರೊ. ಕಬಡ್ಡಿ’ಯಲ್ಲಿ ‘ಜೈಪುರ್ ಪಿಂಕ್ ಪ್ಯಾಂಥರ್ಸ್’ ತಂಡ ಅವರನ್ನು ₹96 ಲಕ್ಷಕ್ಕೆ ಖರೀದಿಸಿತ್ತು.

‘ಪ್ರೊ. ಕಬಡ್ಡಿ’ ಟೂರ್ನಿಯ ಒಂಬತ್ತನೇ ಆವೃತ್ತಿಯಲ್ಲಿ ಚಾಂಪಿಯನ್ ಆದ ‘ಜೈಪುರ್ ಪಿಂಕ್ ಪ್ಯಾಂಥರ್ಸ್’ ತಂಡದ ಕೋಚ್ ಸಂಜೀವ್ ಬಲಿಯಾನ್, ‘ತಮಿಳು ತಲೈವಾಸ್’ ತರಬೇತುದಾರ ಆಶನ್ ಕುಮಾರ್ ಭಾರತ ತಂಡದ ಮುಖ್ಯ ಕೋಚ್‌ಗಳಾಗಿದ್ದಾರೆ. ಈ ತಂಡದ ಆಯ್ಕೆಯಾಗಿ ಬಿಹಾರದಲ್ಲಿ ಟ್ರಯಲ್ಸ್ ನಡೆದಿತ್ತಾದರೂ ಅಲ್ಲಿ ಪಾಲ್ಗೊಂಡಿದ್ದ ಬಹುತೇಕ ಆಟಗಾರರು ‘ಪ್ರೊ. ಕಬಡ್ಡಿ’ ಗರಡಿಯಿಂದ ಬಂದವರು. ಭಾರತ ಮತ್ತೆ ಏಷ್ಯಾದ ಪ್ರತಿಷ್ಠಿತ ಟೂರ್ನಿಗಳಲ್ಲಿ ಒಂದಾದ ‘ಏಷ್ಯನ್ ಚಾಂಪಿಯನ್‌ಷಿಪ್’ನಲ್ಲಿ ಚಿನ್ನದ ಮಹಲ್ ಕಟ್ಟುವುದೇ? ಎನ್ನುವ ಕುತೂಹಲವಿದೆ.

ಪ್ರತಿಕ್ರಿಯಿಸಿ: **feedback@sudha.co.in**